3. ಫಾರ್ಮರ್ಸ್ ಸಹಕಾರಿ ನೂಲಿನ ಗಿರಣಿ, ಹುಲಕೋಟಿ, ಈ ಗಿರಣಿಯನ್ನು ರೂ. 1324.00 ಲಕ್ಷಗಳ ಯೋಜನಾ ವೆಚ್ಚದಲ್ಲಿ ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ. ಈ ಪೈಕಿ ರೂ. 543.24 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಈ ಈ ರೀತಿ ನಷ್ಟವನ್ನು ಅನುಭವಿಸುತ್ತಿರುವ ಗಿರಣಿಗಳಿಂದ ವಾರ್ಷಿಕವಾಗಿ ಎಷ್ಟು ಮಾನವ ಶಕ್ತಿ ನಷ್ಟವಾಗಿದೆ?

ಗಿರಣಿಗಳು ನಷ್ಟ ಅನುಭವಿಸುತ್ತಿರುವುದರಿಂದ ವಾರ್ಷಿಕವಾಗಿ ಒಟ್ಟು 4,64,206 ಮಾನವ ದಿನಗಳು ನಷ್ಟವಾಗಿವೆ.

ಸದಸ್ಯರ ಹೆಸರು	:	**ಡಾ:ಸುಧಾಕರ್ ಎಂ.ಸಿ. (ಚಿಂತಾಮಣಿ)**
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(304)120**
ಉತ್ತರಿಸುವ ಸಚಿವರು	:	**(ಶ್ರೀ ಗೂಳಿಹಟ್ಟಿ ಡಿ.ಶೇಖರ್) ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು**

ಅ) ಚಿಂತಾಮಣಿ ತಾಲ್ಲೂಕಿನ ವಿಧಾನಸಭಾ ಕ್ಷೇತ್ರದ ಕತ್ತರಿಗುಪ್ಪೆ ಗ್ರಾಮ ಬಡ ನೇಕಾರರಿಗೆ ಈ ಹಿಂದೆ ವಸತಿ ಷೆಡ್ ನಿರ್ಮಾಣ ಮಾಡಲು ಮಂಜೂರಾದ ಹಣವನ್ನು ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಈ ದುರುಪಯೋಗದ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಚಿಂತಾಮಣಿ ತಾಲ್ಲೂಕು ಕತ್ತರಿಗುಪ್ಪೆ ಗ್ರಾಮದಲ್ಲಿರುವ ಹತ್ತಿ ಕೈಮಗ್ಗ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ., ಈ ಸಂಘಕ್ಕೆ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನೆಯಡಿ 2004-05 ನೇ ಸಾಲಿನಲ್ಲಿ ಬಿಡುಗಡೆ ಮಾಡಿದ್ದ ರೂ.9.80 ಲಕ್ಷಗಳ ಅನುದಾನವನ್ನು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿದ್ದು, ಈ ಸಂಬಂಧ ಇವರ ಮೇಲೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಕೋಲಾರ ಜಿಲ್ಲಾ ಕಚೇರಿಯಿಂದ ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಂತಾಮಣಿ ಇಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.153/04 ಹೂಡಲಾಗಿದ್ದು ಪ್ರಕರಣ ನ್ಯಾಯಾಲಯದಲ್ಲಿರುತ್ತದೆ.